# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 19-11-2022

## ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 178/2022 ಕಲಂ 379 ಐಪಿಸಿ :-

ದಿನಾಂಕ 18/11/2022 ರಂದು 1330 ಗಂಟೆಗೆ ಅರ್ಜಿದಾರ ಶ್ರೀ ಶಿವಾನಂದ ತಂದೆ ರಾಮಣ್ಣಾ ವಯ- 27 ಉ: ಜೆ.ಇ. ಜೇಸ್ಕಾಂ ಸಬ-ಡಿವಿಸನ ಬೀದರ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶ ವೇನೆಂದರೆ ದಿನಾಂಕ 11/11/2022 ರಂದು 1600 ಗಂಟೆಯಿಂದಾ ರಿಂದಾ 12/11/2022 ರಂದು ಮುಂಜಾನೆ 0930 ಗಂಟೆಯ ಅವಧಿಯಲ್ಲಿ ಬೀದರ ಗೋರನಳ್ಳಿ ಶಿವಾರದಲ್ಲಿರುವ ಜೇಸ್ಕಾಂ ಕಂಕನಿಯ 06 ವಿದ್ಯೂತ ಕಂಬಗಳ ಎ.ಸಿ.ಎಸ್.ಆರ ವೈರ (ತಂತಿ) ಅಂ.ಕಿ.70000=00 ರೂ ಮೌಲ್ಯದ ಯಾರೊ ಕಳ್ಳರು ಕಳವು ಮಾಡಿಕೊಂಡು ಹೊಗಿರುತ್ತಾರೆ ಈ ಬಗ್ಗೆ ಸೂಕ್ತ ಕಾನೂನ ಕ್ರಮ ಜರುಗಿಸಬೆಕೆಂದು ಅರ್ಜಿಯ ಸಾರಾಂಶ ಮೇಲಿಂದ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಕೋಳ್ಳಲಾಯಿತು.

## ಮಾರ್ಕೇಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 90/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 18-11-2022 ರಂದು 1230 ಗಂಟೆಯ ಸುಮಾರಿಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ನನಗೆ ಬಾತ್ಮಿ ಬಂದಿದೆನಂದರೆ, ಬೀದರ ನಗರದ ಅಬ್ದುಲ ಫೈಜ ದರ್ಗಾ ಹತ್ತಿರ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದು ಕೊಡುತ್ತಿದ್ದಾನೆಂದು ಖಚಿತ ಬಾತ್ಮಿ ಮೇರೆಗೆ ಇಬ್ಬರು ಪಂಚರು ಮತ್ತು ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಅಬ್ದುಲ ಫೈಜ ದರ್ಗಾದ ಹತ್ತಿರ ಸಾರ್ವಜನಿಕ ರಸ್ತೆಯ ಬದಿಯಲ್ಲಿ ಒಬ್ಬ ವ್ಯಕ್ತಿ ಒಂದು ರೂಪಾಯಿಗೆ 80/- ರೂ ಕೂಡಲಾಗುವದು ಇದು ಮುಂಬೈಯಿ ಮಟಕಾ ಎಂದು ಕೂಗುತ್ತಾ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದು ಕೂಡುವದನ್ನು ನೋಡಿ ಖಚಿತಪಪಡಿಸಿಕೊಂಡು ಪಂಚರ ಸಮಕ್ಷಮ ಸಿಬ್ಬಂಧಿ ಜೊತೆ ಅವನ ಮೇಲೆ ದಾಳಿ ಮಾಡಿ ಅವನಿಗೆ ಅಲ್ಲೆ ಹಿಡಿದುಕೊಂಡು ಅವನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಅವನು ತನ್ನ ಹೆಸರು ಸೈಯದ ಅಮಜದ ತಂದೆ ಸೈಯದ ಶಮಶೋದ್ದಿನ ವಯ 35 ವರ್ಷ ಜಾತಿ ಮುಸ್ಲಿಂ ಉ;ಆಟೊ ಚಾಲಕ ಸಾ:ಕನನ ಕಾಲೋನಿ ಬೀದರ ಅಂತಾ ತಿಳಿಸಿರುತ್ತಾನೆ. ನಂತರ ಅವನಿಗೆ ಚೆಕ್ ಮಾಡಲಾಗಿ, ಅವನ ಹತ್ತಿರ ಮಟಕಾ ಜೂಜಾಟಕ್ಕೆ ಸಂಬಂಧಿಸಿದ ನಗದು ಹಣ 1900/-ರೂ, ಮೂರು ಮಟಕಾ ಚೀಟಿ ಹಾಗು ಒಂದು ಬಾಲಪೇನ ಸಿಕ್ಕಿದ್ದು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.